# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 363/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ನಿಖಿತಾ.ಹೆಚ್.ಆರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ರಾಮಸ್ವಾಮಿ | | **31.08.2023** |
| **ವಯಸ್ಸು** | ಃ **32 ವರ್ಷ** | | |
| **ವೃತ್ತಿ** | ಃ ಅಸಿಸ್ಟಂಟ್ ಇಂಜಿನಿಯರ್, ಮೈಸೂರು | **ಪ್ರಾ.ಸಾ.** ಃ **04** | |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ **19** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. *2018* ಡಿಸೆಂಬರ್ ನಿಂದ *2023* ಆಗಸ್ಟ್ *10* ರ ವರೆಗೆ ನಾನು ಕೆ.ಆರ್.ನಗರದ ಪಿ.ಡಬ್ಲ್ಯೂ.ಡಿ ಕಛೇರಿಯಲ್ಲಿ ಅಸಿಸ್ಟಂಟ್ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ದಿಃ*30.09.2021*ರಂದು ನಮ್ಮ ಕಛೇರಿಗೆ ಸಾಲಿಗ್ರಾಮ ಪೋ.ಠಾಣೆಯಿಂದ ಭೇರ್ಯ ಗ್ರಾಮದ ಸತ್ಯನಾರಾಯಣ ಲಾಲ್ ಮನೆಯ ಮುಂಭಾಗದಲ್ಲಿ ನಡೆದ ಘಟನೆ ಸ್ಥಳಕ ನಕಾಶೆಯನ್ನು ತಯಾರಿಸಿಕೊಡುವಂತೆ ಮನವಿ ಪತ್ರ ಬಂದಿತ್ತು. ಆ ಕಾಲಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನನ್ನನ್ನು ಆ ಸ್ಥಳದ ನಕಾಶೆ ತಯಾರಿಸಲು ನೇಮಿಸಿದ್ದರು. ದಿಃ *25.11.2021* ರಂದು ಸಾಲಿಗ್ರಾಮ ಪೋ.ಠಾಣೆಯ ಮುಖ್ಯ ಪೇದೆ ಮಹೇಶ್ ಎನ್ನುವವರು ತೋರಿಸಿದ್ದ ಸ್ಥಳವನ್ನು ನೋಡಿ ಆ ಸ್ಥಳದ ಕುರಿತು ನಕಾಶೆ ತಯಾರಿಸಿ ಕೊಟ್ಟಿದ್ದೆ. ಈಗ ನಾನು ನೊಡುತ್ತಿರುವ ನಕಾಶೆ ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ನಕಾಶೆಯನ್ನು ನಿ.ಪಿ*-4* ಮತ್ತು ಸಹಿಯನ್ನು ನಿ.ಪಿ*-4(*ಎ*)* ಎಂದು ಗುರುತಿಸಿದೆ.

***SC No.  363/2022***
***PW-04***

<u>ಪಾಟೀ ಸವಾಲು ೩2 ರಿಂದ 4 ನೇ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ-</u>

*2.* ನಕಾಶೆ ತಯಾರಿಸುವ ಕಾಲಕ್ಕೆ ಗಾಯಾಳು ನನಗೆ ಸ್ಥಳವನ್ನು ತೋರಿಸಿಲ್ಲ. ಪೋಲೀಸರು ತೋರಿಸಿ ವಿವರಿಸಿದಂತೆ ಆ ಸ್ಥಳದ ಕುರಿತು ನಕಾಶೆ ತಯಾರಿಸಿದ್ದೇನೆ.

**ಈ ವೇಳೆಗೆ *1* ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು *1* ನೇ ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು